Library)
No. (B) 4803

MYSORE LEGISLATIVE ASSEMBLY

EIGHTY-FIRST DAY

Tuesday, 10th December 1963.

The House met in the Assembly Hall, Vidhana Soudha, Bangalore, at Two of the Clock.

MR. SPEAKER (SRI B. VAIKUNTA BALIGA, B.A.,B.L.) in the Chair.

STARRED QUESTIONS

(to which oral answers were given)

Number of Technical Colleges like Medical, Engineering and Polytechnics opened in the State.

*Q.—895. Sri C. J. MUCKANNAPPA (Sira).—

Will the Government be pleased to state :—

(*a*) the number of Technical Colleges like Medical, Engineering and Polytechnics that have been opened for the past two years in the State ;

(*b*) out of them how many are managed by Government and how many of them are managed by various private agencies:

(*c*) the requirements to be fulfilled by private technical institutions to get sanction from Government ?

*A.—Sri S. R. KANTHI (Minister for Education).—

(*a*)—

(i) Engineering Colleges	...	6
(ii) Medical Colleges	...	4
(iii) Polytechnics	...	5

(*b*)—

Engineering Colleges	...	All 6 managed by private agencies.
Medical Colleges	...	One managed by Government and three by private agencies.
Polytechnics	...	All 5 managed by Government.

(SRI S. R. KANTHI)

(c) *Engineering Colleges and Polytechnics.*—The private agency sponsoring the institution should first apply to the Government in the Education Department where the proposal will be considered with reference to financial resources and the need for such an institution. After the proposal is accepted in principle, the Southern Regional Committee, Madras, and the Government of India will be approached and thereafter it will be brought into the Plan with the approval of the concerned Ministry and the Planning Commission. After it is finally approved by the Centre, the proposal has to be implemented.

In the case of Colleges of the University regulations for affiliation are to be complied with.

If private agencies have the resources for starting Engineering Colleges, they approach the Universities for affiliation direct.

Medical Colleges.—(1) Sound financial position of the sponsoring organisation and (2) Capability, etc., of the organisation to run the institution efficiently.

MR. SPEAKER.—Before supplementaries are taken up, may I know if the matter is pending in the Courts ?

†SRI S. R. KANTHI.—No, Sir.

SRI C. J. MUCKANNAPPA.—May I know where these Engineering and Medical Colleges are located?

SRI S. R. KANTHI.—The M. S. Ramaiah College of Engineering is at Bangalore, The R. V. Engineering College is at Bangalore, the Jayachamarajendra College of Engineering is at Mysore, the Siddaganga College of Engineering is at Tumkur and the College of Engineering at Mandya and the Engineering College at Bagalkot.....

About Medical Colleges, one is in Bangalore, the other is in Gulbarga and the third is in Belgaum. In addition to these, there are three colleges in the pool, one in Bangalore, one in Mysore and one in Hubli.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಬೆಳಗಾಂನಲ್ಲಿರುವ ಕಾಲೇಜನ್ನು ನಡೆಸತಕ್ಕ ಮ್ಯಾನೇಜ್‌ಮೆಂಟಿನ ಹೆಸರು ಮತ್ತು ಅದರ ಪರ್ಸೊನೆಲ್ ಹೇಳುವುದಕ್ಕೆ ಸಾಧ್ಯವೇ ?

ಶ್ರೀ ಎಸ್. ಆರ್. ಕಂಠಿ.—ಹೆಸರು ಗೊತ್ತಿದೆ; ಅದರ ಹೆಸರು ಕರ್ನಾಟಕ ಲಬರರ್ ಎಜ್ಯುಕೇಷನ್ ಸೊಸೈಟಿ ಎಂದು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಆ ಸೊಸೈಟಿಯವರಿಗೆ ಮೆಡಿಕರ್ ಕಾಲೇಜನ್ನು ನಡೆಸುವುದಕ್ಕೆ ಇರತಕ್ಕ ಅನುಕೂಲಗಳೇನು ಮತ್ತು ಅದಕ್ಕೆ ಸರ್ಕಾರ ಅನುಮತಿ ಕೊಟ್ಟಿದ್ದು ಯಾವಾಗ ?

ಶ್ರೀ ಎಸ್. ಆರ್. ಕಂಠಿ.—ಆ ಸೊಸೈಟಿ ಈಗ 40-45 ವರ್ಷಗಳಿಂದ ಎಜ್ಯುಕೇಷನ್ ಫೀಲ್ಡಿನಲ್ಲಿ ಕೆಲಸ ಮಾಡುತ್ತಾ ಇದೆ, ಅದರ ಬಳಿ ಆಸ್ತಿ, ಒಂದು ಕೋಟಿ ರೂಪಾಯಿಗಳಿಗಿಂತಲೂ ಜಾಸ್ತಿ ಇದೆ, ಆ ಮೇರೆಗೆ ಅವರಿಗೆ ಇದನ್ನು ನಡಸುವುದಕ್ಕೆ ಯೋಗ್ಯತೆ ಇದೆ ಎಂದು ಸರ್ಕಾರದವರಿಗೆ ಕಂಡುಬಂದಿದೆ ಮತ್ತು 25 ಲಕ್ಷ ರೂಪಾಯಿಗಳ ಡಿಪಾಸಿಟ್ ಕೊಡಬೇಕೆಂದು ಅವರನ್ನು ಕೇಳಿದ್ದೇವೆ ಮತ್ತು ಗವರ್ನಿಂಗ್ ಬಾಡಿಯವರು ಸರ್ಕಾರದವರು ಯಾವ ರೀತಿ ಮಾಡಬೇಕೆಂದು ಹೇಳಿದ್ದರೋ ಆ ಪ್ರಕಾರ ಮಾಡುವುದಕ್ಕೆ ಒಪ್ಪಿಕೊಂಡಿದ್ದಾರೆ, ಇದನ್ನೆಲ್ಲಾ ಪರಿಶೀಲನೆ ಮಾಡಿ ಅವರಿಗೆ ಅನುಮತಿ ಕೊಡಲಾಗಿದೆ.

†Indicates that remarks or speeches have not been revised by the member concerne

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಬೆಳಗಾಂ ಕಾಲೇಜಿಗೆ—ಹಣಕಾಸಿನ ಸೌಲಭ್ಯ ಬಿಟ್ಟು ಬಾಕಿ ಎಲ್ಲಾ ಅನುಕೂಲಗಳೂ ಸಿಕ್ಕಿವೆಯೇ?

ಶ್ರೀ ಎಸ್. ಆರ್. ಕಂಠಿ.—ಆಸ್ಪತ್ರೆಯಲ್ಲಿ ಕ್ಲಿನಿಕಲ್ ಫೆಸಿಲಿಟೀಸ್ ಕೊಡುವುದಕ್ಕೆ ಒಪ್ಪಿ ಕೊಂಡಿದ್ದೇವೆ, ಅದರಂತೆ ಕಾಲೇಜನ್ನು ಮಾಡುವುದಕ್ಕೆ ಸಿದ್ಧವಾಗಿದ್ದಾರೆ, ಮಾಡುತ್ತಾ ಇದ್ದಾರೆ.

ಶ್ರೀ ಎಸ್. ಗೋಪಾಲ ಸಾರೆನ್ನ.—ಇದಲ್ಲದೇ ಮತ್ತೇನಾದರೂ ಕಾಲೇಜುಗಳನ್ನು ಮತ್ತು ಹೈಸ್ಕೂಲುಗಳನ್ನು ಅವರು ನಡೆಸುತ್ತಾ ಇದ್ದಾರೆಯೇ?

ಶ್ರೀ ಎಸ್. ಆರ್. ಕಂಠಿ.—ಒಟ್ಟು ಅವರು 40-50 ವಿದ್ಯಾ ಸಂಸ್ಥೆಗಳನ್ನು ನಡೆಸುತ್ತಾ ಇದ್ದಾರೆ.

ಶ್ರೀ ಎಸ್. ಗೋಪಾಲ ಸಾರೆನ್ನ.—ಕರ್ನಾಟಕದಲ್ಲಿ ಮತ್ತು ಯಾವುದಾದರೂ ಅಂತಹ ಸಂಸ್ಥೆ ಇದೆಯೇ?

ಶ್ರೀ ಎಸ್. ಆರ್. ಕಂಠಿ.—ಅದು ಬಹಳ ದೊಡ್ಡ ಸೊಸೈಟಿ, ಉಳಿದ ಸೊಸೈಟಿಗಳು ಅಷ್ಟು ದೊಡ್ಡದು ಇವೆಯೋ ಇಲ್ಲವೊ ಹೇಳಲಾರೆ.

ಶ್ರೀ ಎಸ್. ಗೋಪಾಲ ಸಾರೆನ್ನ.—ಮಂಗಳೂರಿನಲ್ಲಿ ಒಂದು ಮೆಡಿಕಲ್ ಕಾಲೇಜು ಸ್ಥಾಪನೆ ಯಾಗುತ್ತದೆ ಎಂದು ಮಾನ್ಯ ಆರೋಗ್ಯ ಸಚಿವರು ಹೇಳಿಕೆ ಕೊಟ್ಟಂತೆ ಕನ್ನಡ ಪತ್ರಿಕೆಯಲ್ಲಿ ಪ್ರಕಟವಾ ಗಿತ್ತು, ಅದಕ್ಕೆ ಬೇಕಾದ ಸೌಕರ್ಯದ ವಿಚಾರದಲ್ಲಿ ಸರ್ಕಾರದವರು ಏನು ನಿರ್ಧಾರ ಕೈಕೊಂಡಿ ದ್ದಾರೆ?

ಶ್ರೀ ಎಸ್. ಆರ್. ಕಂಠಿ.—ಮಂಗಳೂರಿನ ವಿಚಾರ ಇಲ್ಲಿ ಇಲ್ಲ.

ಶ್ರೀ ಬಿ. ಎಲ್. ಗೌಡ.—ಬೆಳಗಾಂ ಕಾಲೇಜಿನಲ್ಲಿ ಪ್ರವೇಶ ದೊರೆಯಲಿಕ್ಕೆ ಒಬ್ಬ ವಿದ್ಯಾರ್ಥಿ ಯಿಂದ ಐದು ಸಾವಿರ ರೂಪಾಯಿಗಳಿಗಿಂತಲೂ ಹೆಚ್ಚು ಹಣ ಪಡೆಯಲಿಕ್ಕೆ ಅನುಮತಿ ಕೊಟ್ಟಿದ್ದೀರಾ?

ಶ್ರೀ ಎಸ್. ಆರ್. ಕಂಠಿ.—ಸಾಮಾನ್ಯವಾಗಿ ಮೂರು ಸಾವಿರ ರೂಪಾಯಿಗಳನ್ನು ತೆಗೆದು ಕೊಳ್ಳುತ್ತಾ ಇದ್ದಾರೆ. ಮ್ಯೆನೂರು ವಿದ್ಯಾರ್ಥಿಗಳಿಂದ ಮೂರು ಸಾವಿರ ರೂಪಾಯಿ, ಹೊರಗಿನವ ರಿಂದ ಐದು ಸಾವಿರ ರೂಪಾಯಿಗಳನ್ನು ತೆಗೆದುಕೊಳ್ಳುತ್ತಾ ಇದ್ದಾರೆ.

ಶ್ರೀ ಸಿದ್ಧಯ್ಯ ಕಾಶೀಮಠ.—ಗುಲ್ಬರ್ಗಾ ಮೆಡಿಕಲ್ ಕಾಲೇಜು ಯಾವ ಸಂಸ್ಥೆಯ ವತಿಯಿಂದ ನಡೆಸಲ್ಪಡುತ್ತಿದೆ ಮತ್ತು ಅದರ ಸ್ಥಾಪನೆ ಮಾಡಲಿಕ್ಕೆ ಎಲ್ಲಾ ಸೌಕರ್ಯ ಇದೆಯೇ ಹೇಗೆ?

ಶ್ರೀ ಎಸ್. ಆರ್. ಕಂಠಿ.—ಗುಲ್ಬರ್ಗಾದಲ್ಲೂ ಕ್ಲಿನಿಕಲ್ ಫೆಸಿಲಿಟೀಸ್ ವಿಚಾರದಲ್ಲಿ ಸರ್ಕಾರದವರ ಅನುಮತಿ ಕೇಳಿದ್ದರು; ಒಪ್ಪಿಕೊಂಡಿದ್ದೇವೆ, ಕ್ಲಾಸ್ ಮತ್ತು ಕಾಲೇಜನ್ನು ನಡೆಸು ವವರು ಅವರು, ಅವರೇ ನಡೆಸುತ್ತಾ ಇದ್ದಾರೆ.

ಶ್ರೀ ದಯಾನಂದ ಆರ್. ಕಳ್ಳಿ.—ಬೆಳಗಾಂ ಮತ್ತು ಗುಲ್ಬರ್ಗ ಕಾಲೇಜುಗಳಿಗೆ ಕರ್ನಾಟಕ ಯೂನಿವರ್ಸಿಟಿಯವರು ಮನ್ನಣೆ ಕೊಡಲು ತಡವಾಗಿರುವುದು ನಿಜವೆ?

ಶ್ರೀ ಎಸ್. ಆರ್. ಕಂಠಿ.—ಅದು ಗೊತ್ತಿಲ್ಲ, ಯೂನಿವರ್ಸಿಟಿಯವರು ಅಫಿಲಿಯೇಷನ್ ಕೊಡಬೇಕಾಗುತ್ತದೆ.

ಶ್ರೀ ಚನ್ನಪ್ಪ ವಾಲಿ.—ಇದೊಂದೇ ಕಾಲೇಜಿನಲ್ಲಿ ಆ ರೀತಿ ವಿದ್ಯಾರ್ಥಿಗಳಿಂದ ದುಡ್ಡು ತೆಗೆದು ಕೊಳ್ಳುತ್ತಾ ಇದ್ದಾರೆಯೇ ಅಥವಾ ಮತ್ತಾವುದಾದರೂ ಕಾಲೇಜಿನಲ್ಲೂ ಸಹ ಈ ರೀತಿ ದುಡ್ಡು ತೆಗೆದುಕೊಳ್ಳುತ್ತಾ ಇದ್ದಾರೆಯೇ?

ಶ್ರೀ ಎಸ್. ಆರ್. ಕಂಠಿ.—ಗುಲ್ಬರ್ಗಾದವರು ತೆಗೆದುಕೊಳ್ಳುತ್ತಾರೆ ಮತ್ತು ಮಣಿಪಾಲ್ ನಲ್ಲಿ ಒಂದು ಕಾಲೇಜು ಇದೆ; ಅವರೂ ಸಹ ತೆಗೆದುಕೊಳ್ಳುತ್ತಾರೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಪಾಲಿಟೆಕ್ನಿಕ್ ಮತ್ತು ಇಂಜನಿಯರಿಂಗ್ ಕಾಲೇಜು ಗಳಿಂದ ಪ್ರತಿವರ್ಷ ಹೊರಗೆ ಬರುತ್ತಾ ಇರತಕ್ಕ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ಮತ್ತು ಅವರ ಎಲ್ಲಾ ಎಕ್ಸ್‌ಪೀರಿಯನ್ಸ್‌ನ್ನೂ ನಾವು ಉಪಯೋಗಿಸಿಕೊಳ್ಳುತ್ತಾ ಇದ್ದೇವೆಯೇ?

Mr. SPEAKER.—Why not be more precise? What has the Hon'ble Member in mind?

Sri S. R. KANTHI.—It is a very big question. About 1,000 students are coming out as graduates in Engineering every year. We have not been able to provide jobs to all of them. We have been able to absorb only 30 to 40 per cent.

Mr. SPEAKER.—My impression was that there was dearth of engineering personnel and that there was no one who was unemployed.

Sri S. R. KANTHI.—In regard to the Mysore State it is not correct. They have to seek employment outside the State. There is dearth of such persons in the country as a whole.

ಶ್ರೀ ಎ. ಕೃಷ್ಣ ಶೆಟ್ಟಿ.—ಕರ್ನಾಟಕ ಲಬರರ್ ಸೊಸೈಟಿ ಎಂದು ಹೇಳಿದಿರಲ್ಲಾ ಈ ಸಂಸ್ಥೆಯ ಹೆಸರು ಮೊದಲು ಬೇರೆ ಇತ್ತು ಈಚೆಗೆ ಆ ಹೆಸರು ಅದನ್ನು ಎಂಬುದು ತಮಗೆ ಗೊತ್ತಿದೆಯೇ ?

ಶ್ರೀ ಎಸ್. ಆರ್. ಕಂಠಿ.—ಅದಕ್ಕೆ ಮೊದಲು ಯಾವ ಬೇರೆ ಹೆಸರಿತ್ತೋ ಗೊತ್ತಿಲ್ಲ.

ಶ್ರೀ ಎಸ್. ಎಂ. ಗುರ್ರೆಡ್ಡಿ.—ಬೆಳಗಾಂ ಮತ್ತು ಗುಲ್ಬರ್ಗಾ ಮೆಡಿಕಲ್ ಕಾಲೇಜುಗಳಲ್ಲಿ ಸರ್ಕಾರದವರು ಇಟ್ಟುಕೊಂಡಿರತಕ್ಕ ಸೀಟುಗಳು ಎಷ್ಟು ಮತ್ತು ಅವುಗಳನ್ನು ನಮ್ಮ ರಾಜ್ಯದ ವಿದ್ಯಾರ್ಥಿಗಳಿಗೆ ಮಾತ್ರ ಒದಗಿಸಿದ್ದೀರಾ ಅಥವಾ ಬೇರೆ ಕಡೆಯಿಂದ ಬಂದಂಥ ವಿದ್ಯಾರ್ಥಿಗಳಿಗೂ ಅಲ್ಲಿ ಸೀಟುಗಳನ್ನು ಕೊಟ್ಟಿದ್ದೀರಾ ಹೇಗೆ ?

Sri S. R. KANTHI.—About 10 per cent of the seats are allotted to Government.

ಸರ್ಕಾರದವರು ಯಾರ್ಯಾರಿಗೆ ಕೊಟ್ಟಿದ್ದಾರೆ ಎಂಬ ಹೆಸರು ಇಲ್ಲ ಇಲ್ಲ; ಬೇಕಾದರೆ ನೋಡಿ ಹೇಳುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅಲ್ಲಿಂದ ಪಾಸ್ ಮಾಡಿಕೊಂಡು ಬರತಕ್ಕ ನಮ್ಮ ವಿದ್ಯಾರ್ಥಿಗಳಿಗೆ ಬೇರೆ ದಾರಿ ತೋರಿಸುತ್ತೀರೋ ಅಥವಾ ಅವರು ಹಾಗೇ ಕೈಕಟ್ಟಿ ಕುಳಿತು ಕೊಂಡಿರಬೇಕೋ ?

ಶ್ರೀ ಎಸ್. ಆರ್. ಕಂಠಿ.—ಇಂಜಿನಿಯರಿಂಗ್ ಪಾಸ್ ಮಾಡಿರತಕ್ಕವರ್ಯಾರೂ ಕೆಲಸವಿಲ್ಲದೆ ಇಲ್ಲ. ಆದರೆ ಪಾಲಿಟೆಕ್ನಿಕ್ಕಿನಲ್ಲಿ ಪಾಸಾಗಿರತಕ್ಕ ಕೆಲವರಿಗೆ ಕೆಲಸವಿಲ್ಲ ಎಂಬ ವಿಚಾರವನ್ನು ನಾನು ಕೇಳಿದ್ದೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಬೆಳಗಾಂ ಮತ್ತು ಗುಲ್ಬರ್ಗ ಕಾಲೇಜುಗಳು ಸ್ಥಾಪನೆ ಆಗತಕ್ಕ ಕಾಲದಲ್ಲಿ ಅದಕ್ಕೆ ಸಂಬಂಧಪಟ್ಟ ಮಂತ್ರಿಗಳು ಸ್ಥಳದಲ್ಲಿ ಹಾಜರಿಲ್ಲದೆ ಇದ್ದಾಗ ಅಲ್ಲಿ ಸೀಟುಗಳ ಬಗ್ಗೆ ನಡೆದ ಗುಲ್ಮರ್ ಯಾವಾಗ ಮತ್ತು ಹೇಗೆ ತೀರ್ಮಾನವಾಯಿತು ?

ಶ್ರೀ ಎಸ್.ಆರ್. ಕಂಠಿ.—ಆಲ್ಲಿ ಅಂಥ ಗುಲ್ಮರ್ ಸರ್ಕಾರದಪರವಾಗಿ ಆಗಲೀ ಅಥವಾ ಮತ್ತಾವ ರೀತಿಯಲ್ಲಿ ಆಗಿಲ್ಲ. ಆಗ ಸ್ಥಳದಲ್ಲಿ ಆ ಸಂಬಂಧಪಟ್ಟ ಹೆಲ್ತ್ ಮಂತ್ರಿಗಳು ಇಲ್ಲದಿದ್ದರೂ ಸ್ಥಳದಲ್ಲಿದ್ದ ಮುಖ್ಯ ಮಂತ್ರಿಗಳೂ, ಹಣಕಾಸಿನ ಮಂತ್ರಿಗಳೂ ವಿದ್ಯಾಮಂತ್ರಿಗಳೂ ಸೇರಿ ಕೆಲವು ಮಾರ್ಪಾಡು ಗಳನ್ನು ಮಾಡಿ ಅದನ್ನು ತೀರ್ಮಾನ ಮಾಡಿದ್ದಾರೆ. ಆಗ ಅಲ್ಲಿ ಹೆಲ್ತ್ ಮಿನಿಸ್ಟ್ರು ಸಹ ಇದ್ದರು.

ಶ್ರೀ ಗಂಗಾಧರ ನಾಮೋಷಿ.—ಆ ಗುಲ್ಬರ್ಗ ಕಾಲೇಜನ್ನು ಕನ್ಫರ್ಮ್ ಮಾಡತಕ್ಕ ಉದ್ದೇಶ ದಿಂದ ಮೈಸೂರು ಯೂನಿವರ್ಸಿಟಿಯವರು 30 ಲಕ್ಷ ರೂಪಾಯಿಗಳನ್ನೂ ಸರ್ಕಾರದವರು 20 ಲಕ್ಷ ರೂಪಾಯಿಗಳನ್ನೂ ಕೇಳುತ್ತಿದ್ದಾರೆ. ಅಷ್ಟು ಹಣ ಕೊಡಲು ಸಾಧ್ಯವಿಲ್ಲವೆಂದು ಅವರು ಹೇಳುತ್ತಿದ್ದಾರೆ. ಮತ್ತು ಅಲ್ಲಿರತಕ್ಕ ವಿದ್ಯಾರ್ಥಿಗಳಲ್ಲಿ ಒಂದು ಅನ್‌ರೆಸ್ಟ್ ಉಂಟಾಗಿದೆ. ಇದರ ನಿಜಾಂಶವೇ ನೆಂಬುದನ್ನು ತಿಳಿಸುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ಸ್ಯಾಮಿ.....

Sri K. NAGAPPA ALVA.—One clarification is needed here, Sir When the Health Minister was outside India, the Chief Minister was in charge of it.

ಶ್ರೀ ಎಸ್. ಆರ್. ಕಂಠಿ.—ನಾನು ಮೊನ್ನೆ ತಾನೆ ಅಲ್ಲಗೆ ಹೋಗಿದ್ದೆ. ಅಲ್ಲಿ ಅಂಥ ಅನ್‌ರೆಸ್ಟ್ ವಿಚಾರ ಯಾವುದೂ ಕಂಡುಬರಲಲ್ಲ. ಸರ್ಕಾರದವರು ಕೇಳಿರತಕ್ಕ 20 ಲಕ್ಷ ಹಣ ಏನಿದೆಯೋ ಅಷ್ಟನ್ನೇ ಯೂನಿವರ್ಸಿಟಿಯವರೂ ಕೇಳಿದ್ದಾರೆ. ಅದ್ದರಿಂದ ಅಂಥ ಕಳವಳಕ್ಕೆ ಕಾರಣವೇನೂ ಇಲ್ಲ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಈ ಕಾಲೇಜುಗಳನ್ನು ನಡೆಸತಕ್ಕವರು ಸರ್ಕಾರದವರಿಗೆ ತಮಗೆ ಇಂತಿಷ್ಟು ಆಸ್ತಿ ಮತ್ತು ವರಮಾನವಿದೆ ಎಂದು ತಿಳಿಸಿದರೆ ಸರ್ಕಾರದವರು ಅವರಿಗೆ ಕಾಲೇಜುಗಳನ್ನು ನಡೆಸಲು ಪರವಾನಿಗೆ ಕೊಡುತ್ತಾರೆಯೇ ?

ಶ್ರೀ ಎಸ್. ಆರ್. ಕಂಠಿ.—ನಮ್ಮ ಪ್ಲಾನ್‌ನಲ್ಲಿ ಇಂಥಾದ್ದುಯಾವುದೂ ಇಲ್ಲ. ಇದಕ್ಕೆಲ್ಲ ಕ್ರಮಬದ್ಧವಾದ ನಿಯಮಾವಳಿಗಳಿವೆ. ಆದರೆ ಈ ಕಾಲೇಜುಗಳ ವಿಚಾರವೇ ಬೇರೆ. ಇವರು ನೇರವಾಗಿ ಯೂನಿವರ್ಸಿಟಿಯವರಿಂದ ಪರವಾನಿಗೆ ಪಡೆಯುತ್ತಾರೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಈಗ ಈ ಕಾಲೇಜುಗಳಿಗೆ ಇಂತಿಷ್ಟೇ ಫೀ ತೆಗೆದುಕೊಳ್ಳ ಬೇಕೆಂದು ಸರಕಾರದವರು ನಿಗದಿಮಾಡಿದ್ದರೂ ಅವರು ವಿದ್ಯಾರ್ಥಿಗಳಿಂದ ನಮ್ಮ ಮಲೆನಾಡು ಕಾಲೇಜಿನಲ್ಲಿ ಬೆಟರ್‌ಮೆಂಟ್ ಫೀ ಎಂದು 150 ರೂಪಾಯಿಗಳನ್ನು ವಸೂಲ್ಮಾಡುತ್ತಿದ್ದಾರೆ. ಇದನ್ನು ತಡೆಗಟ್ಟಲು ಏನು ಕಾರ್ಯಕ್ರಮ ಕೈಗೊಂಡಿದ್ದೀರಿ ?

ಶ್ರೀ ಎಸ್. ಆರ್. ಕಂಠಿ.—ಅವರು ಅದನ್ನು ವಸೂಲ್ಮಾಡಿಕೊಳ್ಳುವುದಕ್ಕೆ ಯಾವ ಪ್ರತಿಬಂಧಕವೂ ಇಲ್ಲ.

Sri GANJI VEERAPPA.—May I know whether these private colleges both engineering as well as medical, have been getting any financial aid from the Government ?

ಶ್ರೀ ಎಸ್. ಆರ್. ಕಂಠಿ.—ಈಗ ಮೂರು ಕಾಲೇಜುಗಳಿಗೆ ಅಫಿಲಿಯೇಷನ್ ಸಿಕ್ಕಿದೆ. ಇವು ಏನಾ ಸರ್ಕಾರದವರು ಇನ್ನಾವ ಕಾಲೇಜುಗಳನ್ನೂ ಜಾಸ್ತಿ ಮಾಡಿಲ್ಲ.

ಶ್ರೀ ವಿ. ಮುನಿಯಪ್ಪ.—ಈಗ ಪಾಸಾಗಿ ಕೆಲಸವಿಲ್ಲದೆ ಅಲೆಯುತ್ತಿರುವ ಪಾಲಿಟೆಕ್ನಿಕ್ ಶಾಲೆಯ ವಿದ್ಯಾರ್ಥಿಗಳಿಗೆ ಅವರು ಬೇರೆ ಕಡೆಗೆ ಕೆಲಸಕ್ಕೆ ಹೋಗಲು ಸಿದ್ಧರಾಗಿರುವುದರಿಂದ ಅವರ ಬಗ್ಗೆ ಏನಾದರೂ ಏರ್ಪಾಡು ಮಾಡುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ಹೊರಗಡೆ ಹೋಗುವುದೆಂದರೆ ಅವರ ಜಿಲ್ಲೆಯ ಹೊರಗಡೆ ಎಂದು ಅಲ್ಲ, ಅವರು ನಮ್ಮ ಸ್ಟೇಟನ್ನು ಬಿಟ್ಟು ಹೊರಗಡೆ ಹೋಗಬೇಕು.

ಶ್ರೀ ಸಿದ್ದಯ್ಯ ಕಾಶೀಮಠ.—ಸರ್ಕಾರದವರು ಆಲ್‌ಇಂಡಿಯಾ ದೃಷ್ಟಿಯಿಂದ ಇಲ್ಲಿ ಇನ್ನೂ ಕೆಲವು ಇಂಜಿನಿಯರಿಂಗ್ ಕಾಲೇಜುಗಳನ್ನೂ ಮತ್ತು ಪಾಲಿಟೆಕ್ನಿಕ್‌ಗಳನ್ನೂ ತೆರೆಯತಕ್ಕ ಸಂಭವ ಉಂಟೇ ?

ಶ್ರೀ ಎಸ್. ಆರ್. ಕಂಠಿ.—ಈಗಾಗಲೇ ನಮ್ಮಲ್ಲಿ 6 ಖಾಸಗೀ ಇಂಜಿನಿಯರಿಂಗ್ ಕಾಲೇಜುಗಳೂ ಸೇರಿ ಒಟ್ಟು 16 ಕಾಲೇಜುಗಳಿರುತ್ತವೆ. ಇನ್ನು ಪಾಲಿಟೆಕ್ನಿಕ್‌ಗಳ ಪೈಕಿ 27 ಗಂಡು ಹುಡುಗರ ಮತ್ತು 2 ಹೆಣ್ಣು ಮಕ್ಕಳ ಕಾಲೇಜುಗಳು, ಹೀಗೆ ಒಟ್ಟು 29 ಇವೆ. ಇಷ್ಟು ಕಾಲೇಜುಗಳು ಇನ್ನೆಲ್ಲಿಯೂ ಇಲ್ಲ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಮಲೆನಾಡಿನಲ್ಲಿ ಒಂದು ಮೆಡಿಕಲ್ ಕಾಲೇಜನ್ನು ತೆರೆಯತಕ್ಕ ಸಂಭವ ಉಂಟೇ ?

ಶ್ರೀ ಎಸ್ ಆರ್. ಕಂಠಿ.—ಸದ್ಯಕ್ಕೆ ಇಲ್ಲ.

ಶ್ರೀ ಎ. ಕೃಷ್ಣ ಶೆಟ್ಟಿ.—ಈ ಖಾಸಗೀ ಇಂಜಿನಿಯರಿಂಗ್ ಕಾಲೇಜಿನಲ್ಲಿ ಸರ್ಕಾರಕ್ಕೆ ಎಷ್ಟು ಸೀಟ್ಸ್ ಇವೆ ?

ಶ್ರೀ ಎಸ್. ಆರ್. ಕಂಠಿ.—10 ಪರ್ಸೆಂಟ್.

ಶ್ರೀ ಗಂಗಾಧರ ನಾಪೋಷಿ.—ಸರ್ಕಾರಕ್ಕೆ ದೊರೆತಿರುವ 12 ಸೀಟುಗಳಲ್ಲಿ 8ನ್ನು ಆಂಧ್ರಕ್ಕೆ ಕೊಡರಾಗಿದೆ ಎಂದು ಹೇಳುತ್ತಿದ್ದಾರೆ. ಇದು ನಿಜವೇ ?

ಶ್ರೀ ಎಸ್. ಆರ್. ಕಂಠಿ.—ಆ ವಿಚಾರ ನನಗೆ ಇಲ್ಲಿ ಗೊತ್ತಾಗುವುದಿಲ್ಲ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ನಮ್ಮಲ್ಲಿ ಒಂದು ಪಾಲಿಟೆಕ್ನಿಕ್ ಶಾಲೆಯನ್ನು ತೆರೆಯಲು ಹೆಚ್ಚಿನ ಅಗತ್ಯವಿದೆ ಅಲ್ಲವೇ ?

ಶ್ರೀ ಎಸ್. ಆರ್. ಕಂಠಿ.—ಸಾಧ್ಯವಿಲ್ಲ.

Sri GANJI VEERAPPA.—Has it come to the notice of the Government that the University having taken into consideration the fact that these colleges cannot be run without capitation fee, have permitted them to levy capitation fee ?

Sri S. R. KANTHI.—In regard to Engineering Colleges there is no question of allowing anybody to take capitation fee. In respect of medical colleges, they have brought it to the notice of Government and the Government have insisted that gradually the capitation fee should be reduced year by year and within ten years, it should completely disappear.

ಶ್ರೀ ಎನ್. ನಂಜೇ ಗೌಡ.—ಗುಲ್ಬರ್ಗಾ ಹಾಗೂ ಬೆಳಗಾಂನಲ್ಲಿರುವ ಮೆಡಿಕಲ್ ಕಾಲೇಜುಗಳಿಗೆ ಅನುಕೂಲವಾಗುವಂತೆ ಅಲ್ಲಿರುವ ಆಸ್ಪತ್ರೆಗಳಲ್ಲಿರುವ ಬೆಡ್ಡುಗಳ ಸಂಖ್ಯೆ ಎಷ್ಟು ?

ಶ್ರೀ ಎಸ್. ಆರ್. ಕಂಠಿ.—ಬೆಳಗಾಂ ಆಸ್ಪತ್ರೆಯಲ್ಲಿ 450 ಬೆಡ್ಡುಗಳಿವೆ ಮತ್ತು ಗುಲ್ಬರ್ಗಾ ಆಸ್ಪತ್ರೆಯಲ್ಲಿ 250 ಬೆಡ್ಡುಗಳಿವೆ ಎಂದು ಕಾಣಿಸುತ್ತದೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಬೆಳಗಾಂ ಹಾಗೂ ಗುಲ್ಬರ್ಗಾದಲ್ಲಿರುವ ಮೆಡಿಕಲ್ ಕಾಲೇಜುಗಳಿಗೆ ತಕ್ಕ ಆಸ್ಪತ್ರೆಗಳನ್ನು ಒದಗಿಸುವುದಕ್ಕಾಗಿ ಎಷ್ಟು ಹಣವನ್ನು ಖರ್ಚು ಮಾಡುತ್ತಿದ್ದೀರಿ ?

ಶ್ರೀ ಎಸ್. ಆರ್. ಕಂಠಿ.—ಮಾನ್ಯ ಸದಸ್ಯರು ಬೆಳಗಾಂ ಕಡೆ ಹೋಗಿಲ್ಲ ಎಂದು ಕಾಣುತ್ತದೆ. ಈಗಾಗಲೇ ಅಲ್ಲಿರುವ ಅನ್ಪತ್ತೆ ಚೆನ್ನಾಗಿದೆ. ನಾನಾಗಲೇ ಹೇಳಿದಂತೆ ಅಲ್ಲಿ 450 ಬೆಡ್ಡುಗಳಿವೆ. ಇದನ್ನು ಇನ್ನೂ ಹೆಚ್ಚು ಮಾಡಲು ಒಂದು ಸ್ಕೀಮನ್ನು ತಯಾರು ಮಾಡಬೇಕೆಂದು ಯೋಚನೆ ಮಾಡಲಾಗುತ್ತಿದೆ.

ಶ್ರೀ ಗಂಗಾಧರ ನಾಮೋಷಿ.—ಗುಲ್ಬರ್ಗಾ ಮೆಡಿಕಲ್ ಕಾಲೇಜು ಹಾಗೂ ಬೆಳಗಾಂನಲ್ಲಿರುವ ಮೆಡಿಕಲ್ ಕಾಲೇಜುಗಳಲ್ಲಿ ಮೊದಲು 5,000 ರೂಪಾಯಿಗಳಷ್ಟು ಕೊಡಬೇಕೆಂದು ನಿರ್ಣಯ ಮಾಡಿ ಅದರಂತೆ ತಕ್ಕ ಕ್ರಮ ತೆಗೆದುಕೊಂಡ ನಂತರ, 3,000 ರೂಪಾಯಿಗಳಷ್ಟನ್ನು ಮ್ಯೆನೂರಿನವರಿಗಾಗಿ ಎಂದು ಸರ್ಕಾರ ತೀರ್ಮಾನ ಮಾಡಿದರೂ ಇಲ್ಲಿನವರಿಗೆ ಹೆಚ್ಚಿಗೆ ಸೀಟುಗಳನ್ನು ಕೊಡರಾಗಲಲ್ಲ ಎನ್ನುವುದು ನಿಜವೇ?

ಶ್ರೀ ಎಸ್. ಆರ್. ಕಂಠಿ.—ಮಾನ್ಯ ಸದಸ್ಯರ ಭಾವನೆ ತಪ್ಪು.

ಶ್ರೀ ಎಸ್. ಗೋಪಾಲ ರೆಡ್ಡಿ.—ಒಂದು ಕಡೆ ಕ್ಲಿನಿಕಲ್ ಫೆಸಿಲಿಟಿಗಳನ್ನು ಕೊಡುವುದಕ್ಕಾಗಿದೇ ಇರುವುದು, ಇನ್ನೊಂದು ಕಡೆ ಅಧ್ಯಾಪಕರುಗಳ ಕೊರತೆ ಇರುವುದು—ಈ ಕಾರಣಗಳಿಂದಾಗಿ ಕಾಲೇಜುಗಳಲ್ಲಿ ಸೀಟುಗಳನ್ನು ಕೊಡರಾಗಲಲ್ಲ ಎನ್ನುವುದು ನಿಜವೇ?

ಶ್ರೀ ಎಸ್. ಆರ್. ಕಂಠಿ.—ಮುಂದೆ ಏನಾಗುತ್ತದೋ ಅದನ್ನು ಹೇಳುವುದಕ್ಕಾಗುವುದಿಲ್ಲ. ತಾವು ಸ್ವಲ್ಪ ಮಣಿಪಾಲ್‌ವರೆಗೆ ಹೋಗಿ ಬಂದರೆ ತಮಗೇ ಗೊತ್ತಾಗುತ್ತದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮೆಡಿಕಲ್ ಕಾಲೇಜನ್ನು ಸ್ಥಾಪನೆ ಮಾಡುವುದರ ಉದ್ದೇಶ ಮ್ಯೆನೂರಿನ ಜನತೆಗೆ ಅನುಕೂಲವಾಗಬೇಕೆಂದು. ಆದರೆ ಗುಲ್ಬರ್ಗಾ ಹಾಗೂ ಬೆಳಗಾಂನಲ್ಲಿರುವ ಮೆಡಿಕಲ್ ಕಾಲೇಜುಗಳಲ್ಲಿ ಬರೀ ಆಂಧ್ರದವರು ಹಾಗೂ ಮಹಾರಾಷ್ಟ್ರದವರು ತುಂಬಿಕೊಂಡಿದ್ದಾರೆ ಹಾಗೂ 5,000 ದಿಂದ ಹತ್ತು ಸಾವಿರದವರೆಗೂ ಸೀಟುಗಳು ಮಾರಾಟವಾಗುತ್ತಿರುವುದು ಸರಕಾರಕ್ಕೆ ಗೊತ್ತಿಲ್ಲವೇ?

ಶ್ರೀ ಎಸ್. ಆರ್. ಕಂಠಿ.—ಇಲ್ಲ ಹೇಗಿದೆಯೋ ಈಗ ನನಗೆ ಗೊತ್ತಿಲ್ಲ. ನಾನು ಕೇಳಿದ ಮಟ್ಟಿಗೆ ಆಂಧ್ರದವರಿಗೆ ಹಾಗೂ ಮಹಾರಷ್ಟ್ರದವರಿಗೇ ಎಲ್ಲ ಸೀಟುಗಳನ್ನೂ ಕೊಟ್ಟಿದ್ದಾರೆ ಎನ್ನುವ ಭಾವನೆ ಸರಿಯಲ್ಲ.

Facilities provided for the Study of Hindi Vidwan Course in Mysore Government Training College.

*Q.—917. Smt. G. C. BHAGEERATHAMMA (Tumkur).—

Will the Government be pleased to state :—

(*a*) whether it is a fact that facilities have been provided for the study of Hindi Vidwan Course, in the Mysore Government Training College since 1955 ;

(*b*) whether there is any difference in the Hindi Vidwan Examination, conducted by the Government College and the private recognised Hindi Institutions in the State ?

A.—Sri S. R. KANTHI (Minister for Education).—

(*a*) Yes.

(*b*) The question does not arise as the Hindi Vidwan examination is conducted only by Government.

ಶ್ರೀಮತಿ ಜಿ. ಸಿ. ಭಾಗೀರಥಮ್ಮ.—ಹಿಂದಿ ವಿದ್ವಾನ್ ಕೋರ್ಸನ್ನು ಎಷ್ಟು ವರ್ಷಗಳ ಕೋರ್ಸು ಎಂದು ಮಾಡಲಾಗಿದೆ?

†ಶ್ರೀ ಎಸ್. ಆರ್. ಕಂಠಿ.—ನಾಲ್ಕು ವರ್ಷದ ಕೋರ್ಸು ಎಂದು ಮಾಡಲಾಗಿದೆ.